ಶ್ರೀ ಏನ್. ಎಸ್. ಬೆಲ್ಲದ.—(ಅ) ಪ್ರಶ್ನೆಗೆ ಉತ್ತರವಾಗಿ ಆಡಿಟರ್ ಅವರು ಅಂತಹ ಅಭಿಪ್ರಾಯವನ್ನು ವ್ಯಕ್ತಪಡಿಸಿಲ್ಲವೆಂದು ಹೇಳಲಾಗಿದೆ. ಮಾರ್ಕೆಟಿಂಗ್ ಸೊಸೈಟಿಯು ಬೈಲಾ ಪ್ರಕಾರ ಹೈಬ್ರಿಡ್ ಬೀಜ ಉತ್ಪಾದನೆ ಮಾಡಲು ಸಂಘದ ಹಣವನ್ನು ಉಪಯೋಗ ಮಾಡಬಹುದೇ?

†ಶ್ರೀ ಬಿ. ಎಲ್. ಗೌಡ.—ಮಾರ್ಕೆಟಿಂಗ್ ಸೊಸೈಟಿಯ ಬೈಲಾ ಪ್ರಕಾರ ಆ ರೀತಿ ಮಾಡಬಹುದು.

ಶ್ರೀ ಏನ್. ಎಸ್. ಬೆಲ್ಲದ.—ನನ್ನ ಹತ್ತಿರ ಬೈಲಾ ಕಾಪಿ ಇಲ್ಲ, ಒಂದು ಕಾಪಿಯನ್ನು ಬದಗಿಸಿ ಕೊಡುತ್ತೀರಾ?

ಶ್ರೀ ಬಿ. ಎಸ್. ಗೌಡ.—ಬೈಲಾ ಕಾಪಿ ಈಗ ನನ್ನ ಕಡೆ ಇಲ್ಲ. ಆಮೇಲೆ ಒದಗಿಸಿ ಕೊಡುತ್ತೇನೆ.

Sri SIDDIAH KASHIMATH.—May I know the main reasons for suspending the Managing Committee?

ಶ್ರೀ ಬಿ. ಎಸ್. ಗೌಡ.—ಅದು ಈ ಪ್ರಶ್ನೆಯಲ್ಲಿ ಬರುವುದಿಲ್ಲ. ಬೇರೆ ಪ್ರಶ್ನೆ ಕೇಳಿದರೆ ಉತ್ತರ ಒದಗಿಸಲಾಗುತ್ತದೆ.

ಶ್ರೀ ಸದಾಶಿವಪ್ಪ ಪಾಟೀಲ್.—(ಬ) ಪ್ರಶ್ನೆಗೆ ಉತ್ತರವಾಗಿ ಸಂಘದ ವ್ಯವಸ್ಥಾಪಕ ಸಮಿತಿಯನ್ನು ರದ್ದುಗೊಳಿಸಲಾಗಿದೆ ಎಂದು ಹೇಳಲಾಗಿದೆ. ಅದಕ್ಕೆ ಕಾರಣ ಏನು ಎಂದು ಕೇಳಬಹುದೇ?

ಶ್ರೀ ಬಿ. ಎಸ್. ಗೌಡ.—ಮುಖ್ಯವಾಗಿ ಇಲ್ಲಿ ಪ್ರಶ್ನೆ ಇರುವುದು, ರಾಣಿಬೆನ್ನೂರು ತಾಲ್ಲೂಕ್ ವ್ಯವಸಾಯೋತ್ಪನ್ನ ಸಹಕಾರ ಸಂಘದಲ್ಲಿ ಹೈಬ್ರಿಡ್ ಬೀಜ ಉತ್ಪಾದನೆಯಲ್ಲಿ ಹಣ ಲುಕ್ಸಾನಾಗಿದೆಯೇ ಎಂಬ ಬಗ್ಗೆ. ಈ ಕಾರಣದಿಂದ ಸಂಘದ ವ್ಯವಸ್ಥಾಪಕ ಸಮಿತಿಯನ್ನು ರದ್ದುಗೊಳಿಸಿಲ್ಲ. ಬೇರೆ ಬೇರೆ ಕಾರಣಕ್ಕಾಗಿ ರದ್ದುಗೊಳಿಸಲಾಗಿದೆ.

Installation of a Lift in K. R. Hospital, Mysore

41. Sri K. SANGA GOWDA (Lingsugur) :—

Will the Minister for Health be pleased to state:—

(*a*) whether there is any arragement of lift in the K. R. Hospital, Mysore in order to take the patients to the 1st floor;

(*b*) whether the same is in order, if not, since how many months it is not in working condition?

Sri Y. RAMAKRISHNA (Minister for Health).—

(*a*) Yes.

(*b*) No. It is an old lift and is going out of order frequently. It has gone out of order in the last week of June 1969.

Sri K. SANGANGOWDA.—May I know whether the lift is in working condition now?

Sri Y. RAMAKRISHNA.—No, Sir, the lift is not in working condition.

†Indicates that the remarks or speeches have not been revised by the member concerned.

Sri K. SANGANGOWDA.—In view of the fact that a number of patients undergo operations daily and in some cases serious operations are done in that hospi al is it not the duty of the Government to see that the lift is put in order ?

Sri Y. RAMAKRISHNA.—There are two lifts under erection. I will see that they are completed as early as possible.

Sri B. B. SAYANAK.—Are the Government going to replace this old lift by a new one ?

Sri Y. RAMAKRISHNA.—I have already said that two lifts are under erection.

Secretaries and Deputy Secretaries working in Secretariat

55. Sri MAHADEV G. BANAKAR (Byadgi).—

Will the Chief Minister be pleased to state :—

(*a*) the number of Secretaries and Deputy Secretaries to Government working in the Mysore Government Secretariat as on 1st January 1969 ;

(*b*) how many are from New Mysore area and how many are from Old Mysore area ?

Sri VEERENDRA PATIL (Chief Minister).—

(*a*) 48.

(*b*) (i) New Mysore Area : 20

(ii) Old Mysore Area : 24

The rest are from the areas outside the New Mysore area.

ಶ್ರೀ ಮಹದೇವ ಜಿ. ಬಣಕಾರ.—ಸ್ವಾಮಿ, ನನ್ನ (ಅ) ಪ್ರಶ್ನೆಗೆ ಉತ್ತರವಾಗಿ ಹೊಸ ಮೈಸೂರು ಪ್ರದೇಶದವರು 20, ಹಳೇ ಮೈಸೂರು ಪ್ರದೇಶದವರು 24 ಇತರರು ಹೊಸ ಮೈಸೂರು ಪ್ರದೇಶದ ಹೊರಗಿನವರು ಎಂದು ಹೇಳಿದ್ದೀರಿ. ಇತರರು ಹೊಸ ಮೈಸೂರು ಪ್ರದೇಶದ ಹೊರಗಿನವರು ಎಂದರೆ ಅವರು ಹಳೆಯ ಮೈಸೂರಿನವರೇ ಅಥವಾ ಹೊಸ ಮೈಸೂರಿನವರೇ ?

†ಶ್ರೀ ವೀರೇಂದ್ರ ಪಾಟೀಲ್.—ಅವರು ಹೊಸ ಮೈಸೂರಿನವರೂ ಅಲ್ಲ, ಹಳೆಯ ಮೈಸೂರಿನವರೂ ಅಲ್ಲ, ಹೊರಗಡೆಯಿಂದ ಬಂದಿರುವವರು. ಐ. ಎ. ಎಸ್. ರೆಕ್ರೂಟ್‌ಮೆಂಟ್‌ನಲ್ಲಿ ನಮ್ಮ ರಾಜ್ಯಕ್ಕೆ ಇಷ್ಟು ಎಂದು ಕೋಟಾ ಅಲಾಟ್ ಮಾಡುತ್ತಾರೆ. ಈ ಅಲಾಟ್‌ಮೆಂಟ್ ಪ್ರಕಾರ ಹೊರ ರಾಜ್ಯದ ನಾಲ್ಕರು ಅಧಿಕಾರಿಗಳು ಸಚಿವಾಲಯದಲ್ಲಿ ಕೆಲಸ ಮಾಡುತ್ತಿದ್ದಾರೆ.

ಶ್ರೀ ಮಹದೇವ ಜಿ. ಬಣಕಾರ್.—ಹೊಸ ಮೈಸೂರು ಪ್ರದೇಶದ ಹೊರಗಿನವರು ಎಂದು ಉತ್ತರದಲ್ಲಿ ಹೇಳಿದ್ದೀರಲ್ಲ ಇವರು ಯಾವ ಭಾಗಕ್ಕೆ ಸೇರಿದವರು ?

ಶ್ರೀ ವೀರೇಂದ್ರ ಪಾಟೀಲ್.—ಔಟ್‌ಸೈಡ್ ಸ್ಟೇಟ್ ಅಫ್ ಮೈಸೂರು ಎಂದರೆ ಹೊರಗಡೆ ದೇಶದವರು ಎಂದರ್ಥ ಇವರು ಮೈಸೂರು ರಾಜ್ಯದವರಲ್ಲ.